# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 18, 2021

ಸಂಪುಟ : 48 ಸಂಚಿಕೆ : 126 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ನಾಳೆ ಬಿಜೆಪಿ ಕಾರ್ಯಕಾರಿಣಿ ಸಭೆ

### ಇಂದು ಕೋರ್ ಕಮಿಟಿ ಸಭೆ, ಸಕಲ ಸಿದ್ಧತೆ: ಸಂಸದ ಸಿದ್ದೇಶ್ವರ



ದಾವಣಗೆರೆ, ಸೆ.17- ಭಾರತೀಯ ಜನತಾ ಪಕ್ಷದ ಕಾರ್ಯಕಾರಿಣಿ ಸಭೆಯು ದಿ.19ರ ಭಾನುವಾರ ನಗರದ ತ್ರಿಶೂಲ್ ಕಲಾಭವನದಲ್ಲಿ ನಡೆಯಲಿದ್ದು, ಅದಕ್ಕೂ ಮುನ್ನಾ ದಿನವಾದ ಶನಿವಾರ ಸಂಜೆ ಅಪೂರ್ವ ರೆಸಾರ್ಟ್‌ನಲ್ಲಿ ಕೋರ್ ಕಮಿಟಿ ಸಭೆ ನಡೆಯಲಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ಹೋಟೆಲ್ ಶಾಂತಿ ರಾಯಲ್ಸ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಅಭಿವೃದ್ಧಿ, ಪಕ್ಷ ಸಂಘಟನೆ, ಮುಂಬರುವ ಚುನಾವಣೆಗಳ ಬಗ್ಗೆ ಸಿದ್ಧತೆ ಮುಂತಾದ ವಿಷಯಗಳ ಕುರಿತು ಕಾರ್ಯಕಾರಿಣಿಯಲ್ಲಿ ಚರ್ಚೆಗಳಾಗಲಿವೆ ಎಂದರು.

ಮೂರ್ನಾಲ್ಕು ತಿಂಗಳಿಗೊಮ್ಮೆ ಕಾರ್ಯಕಾರಿಣಿ ನಡೆಯುತ್ತದೆ. ಈ ಬಾರಿ ದಾವಣಗೆರೆಯಲ್ಲಿ ಸಭೆ ಆಯೋಜಿಸಲಾಗಿದೆ. ವಿವಿಧ ಮೋರ್ಚಾಗಳ ಪದಾಧಿಕಾರಿಗಳು,

**ಸಭೆಗೆ 574 ಅಪೇಕ್ಷಿತರ ಪೈಕಿ ಕನಿಷ್ಠ 540 ಜನರು ಆಗಮಿಸುವ ನಿರೀಕ್ಷೆ**

**ಮುಖಂಡರಿಗೆ 71 ಪೂರ್ಣ ಕುಂಭದ ಸ್ವಾಗತ**

ಸದಸ್ಯರು ಕಳೆದೊಂದು ವಾರದಿಂದ ಸಭೆಗೆ ಭಾರೀ ಸಿದ್ಧತೆ ಮಾಡಿಕೊಂಡಿದ್ದಾರೆ. ಪ್ರಮುಖ ರಸ್ತೆ, ವೃತ್ತಗಳನ್ನು ಅಲಂಕರಿಸಲಾಗಿದೆ. ನಗರಕ್ಕೆ ಬರುವ ಗಣ್ಯರಿಗೆ ಸ್ವಾಗತ ಕೋರುವ ಫ್ಲೆಕ್ಸ್, ಬಾವುಟಗಳ (2ನೇ ಪುಟಕ್ಕೆ)

## ಜೊಮ್ಯಾಟೋ, ಸ್ವಿಗ್ಗಿ ಜಿಎಸ್‌ಟಿ ವ್ಯಾಪ್ತಿಗೆ

### ಕೊರೊನಾ, ಕ್ಯಾನ್ಸರ್ ಔಷಧಿಗಳಿಗೆ ಜಿಎಸ್‌ಟಿ ವಿನಾಯಿತಿ ಮುಂದುವರಿಕೆ

ಲಖ್ನೌ, ಸೆ. 17 – ಕೊರೊನಾ ಔಷಧಿಗಳಿಗೆ ತೆರಿಗೆ ವಿನಾಯಿತಿ, ಕ್ಯಾನ್ಸರ್ ಔಷಧಗಳಿಗೆ ತೆರಿಗೆ ಕಡಿತ ಹಾಗೂ ಸ್ನಾಯು ದೌರ್ಬಲ್ಯಕ್ಕಾಗಿ ವಿದೇಶದಿಂದ ಮಾಡಿಕೊಳ್ಳುವ ದುಬಾರಿ ಔಷಧಗಳಿಗೆ ಜಿ.ಎಸ್.ಟಿ. ವಿನಾಯಿತಿ ನೀಡುವುದನ್ನು ಮುಂದುವರೆಸಲಾಗಿದೆ. ಆದರೆ, ಪೆಟ್ರೋಲ್ ಹಾಗೂ ಡೀಸೆಲ್‌ಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರಲಾಗಿಲ್ಲ.

ಶುಕ್ರವಾರ ನಡೆದ ಜಿ.ಎಸ್.ಟಿ. ಮಂಡಳಿ ಸಭೆಯಲ್ಲಿ

**ಪೆಟ್ರೋಲ್, ಡೀಸೆಲ್ ಜಿ.ಎಸ್.ಟಿ. ವ್ಯಾಪ್ತಿಯಿಂದ ಹೊರಕ್ಕೆ**

ಜೊಮ್ಯಾಟೋ ಹಾಗೂ ಸ್ವಿಗ್ಗಿ ರೀತಿಯ ಆಪ್‌ಗಳ ಮೂಲಕ ಪೂರೈಸುವ ಆಹಾರಕ್ಕೆ ಶೇ.5ರ ಜಿ.ಎಸ್.ಟಿ. ವಿಧಿಸಲು ನಿರ್ಧರಿಸಲಾಗಿದೆ. (2ನೇ ಪುಟಕ್ಕೆ)

## ಆನ್‌ಲೈನ್ ಜೂಜಾಟ ಸಂಪೂರ್ಣ ನಿಷೇಧ

ಬೆಂಗಳೂರು, ಸೆ. 17 - ರಾಜ್ಯದಲ್ಲಿ ಇನ್ನು ಮುಂದೆ ಆನ್‌ಲೈನ್ ಗೇಮ್‌ಗಳ ಮೂಲಕ ಜೂಜಾಟದಲ್ಲಿ ತೊಡಗುವುದನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ನಿಷೇಧಿಸಿದೆ.

ವಿಧಾನಸಭೆಯಲ್ಲಿಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕರ್ನಾಟಕ ಪೊಲೀಸ್ ತಿದ್ದುಪಡಿ ವಿಧೇಯಕ 2020-21 ಮಂಡಿಸಿದರು.

ಈ ವಿಧೇಯಕದ ಪ್ರಕಾರ ರಾಜ್ಯದ ಒಳಗೆ ಅಥವಾ ಹೊರಗೆ ರೇಸ್‌ಕೋರ್ಸ್‌ನಲ್ಲಿ ಕುದುರೆ ಓಟದ ಪಂದ್ಯಾವಳಿಗಳ ಮೇಲೆ ಬಾಜಿ ಕಟ್ಟುವಿಕೆ ಹೊರತುಪಡಿಸಿ ಆನ್‌ಲೈನ್ ಪಾವತಿ ಮಾಡಿ ವರ್ಚ್ಯುವಲ್ ಕರೆನ್ಸಿ, ಎಲೆಕ್ಟ್ರಾನಿಕ್ ಕರೆನ್ಸಿ ಸೇರಿದಂತೆ ಯಾವುದೇ ಆನ್‌ಲೈನ್ ಗೇಮ್‌ಗಳಲ್ಲಿ ಹಣ ಹೂಡುವುದನ್ನು ಇಲ್ಲವೇ ಜೂಜಾಡುವುದನ್ನು ಸರ್ಕಾರ ನಿಷೇಧಿಸಿದೆ.

ಒಂದು ವೇಳೆ ಯಾರಾದರೂ ಆನ್‌ಲೈನ್‌ನಲ್ಲಿ ತೊಡಗಿಕೊಂಡಿರುವುದು ಕಂಡುಬಂದರೆ ಅಂಥವರಿಗೆ ಒಂದು ವರ್ಷದ ಬದಲಿಗೆ ಮೂರು ವರ್ಷ ಜೈಲು ಶಿಕ್ಷೆ ವಿಧಿಸುವ ಹಾಗೂ ಒಂದು ಸಾವಿರಕ್ಕೆ ಬದಲಾಗಿ ಒಂದು ಲಕ್ಷ ರೂ. ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.

# 2.42 ಕೋಟಿ ಜನರಿಗೆ ಲಸಿಕೆ

ನವದೆಹಲಿ, ಸೆ. 17 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನ್ಮ ದಿನದಂದು ದೇಶಾದ್ಯಂತ ಹಮ್ಮಿಕೊಳ್ಳಲಾಗಿದ್ದ ಕೊರೊನಾ ಲಸಿಕಾ ಅಭಿಯಾನದಲ್ಲಿ ದಾಖಲೆಯ 2.42 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ.

ದೇಶಾದ್ಯಂತ ಇದುವರೆಗೂ ಲಸಿಕೆ ಪಡೆದ ಜನರ ಸಂಖ್ಯೆ ಈಗ 79.21 ಕೋಟಿಗೆ ತಲುಪಿದೆ.

ನಿನ್ನೆ ಗುರುವಾರದಂದು ದೇಶಾದ್ಯಂತ 63.79 ಲಕ್ಷ ಜನರಿಗೆ ಲಸಿಕೆ ನೀಡಲಾಗಿತ್ತು.

ಆರೋಗ್ಯ ಕಾರ್ಯಕರ್ತರು ಹಾಗೂ ದೇಶದ ಜನತೆ ಪರವಾಗಿ ಪ್ರಧಾನ ಮಂತ್ರಿಗೆ ಲಸಿಕಾ ಅಭಿಯಾನದ ಕೊಡುಗೆ ನೀಡಲಾಗಿದೆ. ದೇಶ ಮೊದಲ ಬಾರಿಗೆ ಐತಿಹಾಸಿಕವಾಗಿ ಒಂದೇ ದಿನ 2 ಕೋಟಿಗೂ ಹೆಚ್ಚು ಡೋಸ್ ಲಸಿಕೆ ನೀಡಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಹೇಳಿದ್ದಾರೆ.

**ಪ್ರಧಾನಿ ಜನ್ಮದಿನದಂದು ದೇಶಾದ್ಯಂತ ಬೃಹತ್ ಅಭಿಯಾನ**

ಕಳೆದ ಒಂದು ತಿಂಗಳಲ್ಲಿ ನಾಲ್ಕನೇ ಬಾರಿಗೆ ದೇಶದಲ್ಲಿ ಒಂದೇ ದಿನ ಕೋಟಿಗೂ ಹೆಚ್ಚು ಜನರಿಗೆ ಲಸಿಕೆ ನೀಡಲಾಗಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಜನ್ಮದಿನದಂದು ಮಧ್ಯಾಹ್ನ 1.30ರ ವೇಳೆಗೆ ದೇಶದಲ್ಲಿ ಕೊರೊನಾ ಲಸಿಕೆ ಪಡೆದವರ ಸಂಖ್ಯೆ ಒಂದು ಕೋಟಿಗೆ ತಲುಪಿತ್ತು. ಇಷ್ಟು ವೇಗದಲ್ಲಿ ಎಂದೂ ಲಸಿಕೆ ನೀಡಿರಲಿಲ್ಲ ಎಂದು ಮಾಂಡವೀಯ ಹೇಳಿದ್ದಾರೆ. ಕಳೆದ ಸೆಪ್ಟೆಂಬರ್ 6, (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ 93 ಸಾವಿರ ಜನರಿಗೆ ಲಸಿಕೆ

ದಾವಣಗೆರೆ, ಸೆ.17- ಜಿಲ್ಲೆಯಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಬೃಹತ್ ಕೊರೊನಾ ಲಸಿಕಾ ಮೇಳದಲ್ಲಿ 582 ಲಸಿಕಾ ಕೇಂದ್ರಗಳಲ್ಲಿ 93 ಸಾವಿರ ಜನರಿಗೆ ಲಸಿಕೆ ನೀಡಲಾಗಿದೆ.

ಇಲ್ಲಿನ ವಿದ್ಯಾನಗರದ ಶಿವಪಾರ್ವತಿ ದೇವಸ್ಥಾನದ ಆವರಣದಲ್ಲಿ ಆಯೋಜಿಸಿದ್ದ ಲಸಿಕಾ ಕೇಂದ್ರದಲ್ಲಿ ಲಸಿಕಾ ಮೇಳಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಶುಕ್ರವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದರು, ಜಿಲ್ಲೆಯಲ್ಲಿ ಈಗಾಗಲೇ 10.52 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ. ಇಂದು 582 ಕೇಂದ್ರಗಳಲ್ಲಿ ಸುಮಾರು 1 ಲಕ್ಷ ಜನರಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ವತಿಯಿಂದ ನಗರದ 45 ವಾರ್ಡ್‌ಗಳು, 12

**ಬೃಹತ್ ಲಸಿಕಾ ಮೇಳಕ್ಕೆ ಚಾಲನೆ ನೀಡಿದ ಸಂಸದ ಜಿ.ಎಂ. ಸಿದ್ದೇಶ್ವರ**

ಅರ್ಬನ್ ಸೆಂಟರ್‌ಗಳು, ಜಿಲ್ಲಾ ಚಿಗಟೇರಿ ಆಸ್ಪತ್ರೆ ಸೇರಿ 58 ಕಡೆ ಲಸಿಕೆ ನೀಡಲಾಗುತ್ತಿದೆ. ಅಲ್ಲದೆ ನಗರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯ್ತಿಗಳಲ್ಲೂ ಲಸಿಕಾ ಕಾರ್ಯಕ್ರಮ ಆರಂಭಗೊಂಡಿದೆ. ಡಿಸೆಂಬರ್ ಅಂತ್ಯದೊಳಗೆ ದೇಶದ ಪ್ರತಿಯೊಬ್ಬರೂ ಲಸಿಕೆ ಪಡೆಯಲಿದ್ದಾರೆ ಎಂದು ಹೇಳಿದರು.

ಇಂದು ಪ್ರಧಾನಿ ನರೇಂದ್ರ ಮೋದಿಯವರ ಜನ್ಮ ದಿನವಾಗಿದ್ದು, ದೇಶದ ಎಲ್ಲಾ ಜನತೆಗೆ ಉಚಿತವಾಗಿ ಲಸಿಕೆ ನೀಡುವ ಮೂಲಕ ಪ್ರಪಂಚದಲ್ಲಿ ಯಾರೂ ಮಾಡದ ಕೆಲಸವನ್ನು (2ನೇ ಪುಟಕ್ಕೆ)

## ಲಸಿಕೆಯಲ್ಲಿ ಕರ್ನಾಟಕ ಮುಂಚೂಣಿ

ಬೆಂಗಳೂರು, ಸೆ. 17 – ಶುಕ್ರವಾರ ನಡೆಸಲಾದ ಲಸಿಕಾ ಅಭಿಯಾನದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ 27.80 ಲಕ್ಷಕ್ಕೂ ಹೆಚ್ಚು ಜನರಿಗೆ ಈ ದಿನದಂದು ಲಸಿಕೆ ನೀಡಲಾಗಿದೆ. ರಾಜ್ಯದಲ್ಲಿ ಇದುವರೆಗೂ ಒಟ್ಟಾರೆ 5.13 ಕೋಟಿ ಡೋಸ್ ಲಸಿಕೆ ನೀಡಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಆರೋಗ್ಯ ಸಚಿವ ಡಾ. ಸುಧಾಕರ್, ಕರ್ನಾಟಕದಲ್ಲಿ ಐದು ಕೋಟಿಗೂ ಹೆಚ್ಚು ಜನರಿಗೆ ಇದುವರೆಗೂ ಲಸಿಕೆ ನೀಡಲಾಗಿದೆ. ಶುಕ್ರವಾರದಂದು ಈ ಮೈಲಿಗಲ್ಲು ತಲುಪಲಾಗಿದೆ ಎಂದಿದ್ದಾರೆ.

ಕಳೆದ ಏಳು ತಿಂಗಳಲ್ಲಿ ಲಸಿಕೆಗೆ ಶ್ರಮಿಸಿದ ಆರೋಗ್ಯ ಕಾರ್ಯಕರ್ತರು ಹಾಗೂ ಮಾರ್ಗದರ್ಶನಕ್ಕಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಸಲ್ಲಿಸುವುದಾಗಿ ಅವರು ಹೇಳಿದ್ದಾರೆ.



## 3 ಪಾಸಿಟಿವ್, 6 ಗುಣಮುಖ

ದಾವಣಗೆರೆ, ಸೆ.17 - ಜಿಲ್ಲೆಯಲ್ಲಿ 3 ಜನರಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿದ್ದು, 6 ಜನ ಗುಣಮುಖರಾದ ಬಗ್ಗೆ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಜಗಳೂರು ತಾಲ್ಲೂಕಿನಲ್ಲಿ 1 ಹಾಗೂ ಚನ್ನಗಿರಿ ತಾಲ್ಲೂಕಿನಲ್ಲಿ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 164 ಸಕ್ರಿಯ ಪ್ರಕರಣಗಳಿವೆ.

## ಮೇಲ್ದರ್ಜೆಗೇರಿಸಿರುವ ನಗರಸಭೆ ಪ.ಪಂ. ಮೂಲ ಸೌಕರ್ಯಕ್ಕೆ ಹಣ

ಬೆಂಗಳೂರು, ಸೆ.17 - ಮೇಲ್ದರ್ಜೆಗೇರಿಸಲಾದ ನಗರಸಭೆ ಹಾಗೂ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಲು ಹಣ ಬಿಡುಗಡೆ ಮಾಡಲಾಗಿದೆ ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್ ವಿಧಾನಸಭೆಯಲ್ಲಿ ಪ್ರಕಟಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಜಿ.ಟಿ.ದೇವೇಗೌಡ ಮತ್ತಿತರರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ನಗರಸಭೆಗೆ 75 ಲಕ್ಷ ರೂ. ಹಾಗೂ ಪಟ್ಟಣ ಪಂಚಾಯತ್‌ಗಳಿಗೆ 30 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಬಿಡುಗಡೆಗೊಂಡಿರುವ (2ನೇ ಪುಟಕ್ಕೆ)


॥ ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಪ್ರಸನ್ನ ॥

**ಜಂಗಮ ಗಣಾರಾಧನೆ ಆಹ್ವಾನ**



ಶ್ರೀ ಜೆ.ಎಂ. ವೀರಭದ್ರಯ್ಯ
ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 10.09.2021ನೇ ಶುಕ್ರವಾರ ಬೆಳಿಗ್ಗೆ 6.30ಕ್ಕೆ ನನ್ನ ಧರ್ಮಪತ್ನಿಯಾದ
ಶ್ರೀಮತಿ ವಿಜಯ (ಜಯಮ್ಮ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಜಂಗಮ ಗಣಾರಾಧನೆಯನ್ನು'
ದಿನಾಂಕ : 18.09.2021ನೇ ಶನಿವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ, ಡೋ.ನಂ. ಸಿ6, ಮೊದಲನೇ ಬಸ್ ಸ್ಟಾಪ್ ಹತ್ತಿರ, ಬಾಪೂಜಿ ವಿದ್ಯಾನಗರ, ದಾವಣಗೆರೆ-5.
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀ ಜೆ.ಎಂ. ವೀರಭದ್ರಯ್ಯ ಮತ್ತು ಮಗಳು ಅಳಿಯ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು

**ಹರಿಹರ ತಾಲ್ಲೂಕು ಹನಗವಾಡಿ ರುದ್ರಪ್ಪ ನಿಧನ**



ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದ ದೊಡ್ಡಮನಿ ವಿರುಪಾಕ್ಷಪ್ಪನವರ ತಂದೆಯವರಾದ
ಶ್ರೀ ದೊಡ್ಡಮನಿ ರುದ್ರಪ್ಪನವರು (86)
ಇವರು ದಿನಾಂಕ 17.9.2021 ರ ಶುಕ್ರವಾರ ಸಂಜೆ 5 ಗಂಟೆಗೆ ಹನಗವಾಡಿ ಗ್ರಾಮದಲ್ಲಿ ದೈವಾಧೀನರಾದರು. ಮೃತರು ಪತ್ನಿ ಶ್ರೀಮತಿ ಗಂಗಮ್ಮ ವಿರುಪಾಕ್ಷಪ್ಪ ದೊಡ್ಡಮನಿ, ಶಿವಾನಂದ ದೊಡ್ಡಮನಿ, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.09.2021ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಹನಗವಾಡಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು ಕುಟುಂಬ ವರ್ಗ

**ಬಿ. ವೀರಣ್ಣ ಅವರಿಗೆ ಮಾತೃವಿಯೋಗ**



ದಾವಣಗೆರೆ ನಗರಸಭೆಯ ಮಾಜಿ ಅಧ್ಯಕ್ಷರೂ, ಜಿಲ್ಲಾ ನಾಯಕ ಸಮಾಜದ ಅಧ್ಯಕ್ಷರೂ ಆದ ಬಿ. ವೀರಣ್ಣ ಅವರ ಮಾತೋಶ್ರೀಯವರಾದ
ಶ್ರೀಮತಿ ಹನುಮವ್ವ ಅವರು
ದಿನಾಂಕ 17–09–2021ರ ಶುಕ್ರವಾರ ರಾತ್ರಿ 9 ಗಂಟೆಗೆ ಹೊಂಡದ ಸರ್ಕಲ್‌ನ ಅವರ ನಿವಾಸದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು. ಬಿ. ವೀರಣ್ಣ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18–09–2021ರ ಶನಿವಾರ ಮಧ್ಯಾಹ್ನ 2.30 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು,
ಬಿ. ವೀರಣ್ಣ ಮತ್ತು ಕುಟುಂಬ ವರ್ಗದವರು



**ಸೈಟ್‌ಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ ಉತ್ತರ 30x40 ಅಕ್ಕ-ಪಕ್ಕ, 28x38 ದಕ್ಷಿಣ, 30x50 ಎಸ್. ಎಸ್. ಮಾಲ್ ಎದುರು ದಕ್ಷಿಣ 30x39, ಲಕ್ಷ್ಮಿ ಫ್ಲೋರ್ ಮಿಲ್ ಹಿಂಭಾಗ ಪೂರ್ವ 30x55
ಐಗೂರು ವಿಜಯಕುಮಾರ್
99457 02495

**ಸೈಟ್ ಮಾರಾಟಕ್ಕೆ (13 ಲಕ್ಷಕ್ಕೆ)**
ಕರ್ನಾಟಕ ಗೃಹ ಮಂಡಳಿ(KHB) 9X12 (30x40) ವೆಸ್ಟ್ ಪಾರ್ಕ್ ಎದುರು
ಕಿರಣ್ ಬೂಸ್ನೂರ್ (ಏಜೆಂಟ್)
98440 63409
(ಅರ್ಜೆಂಟ್ ಮಾಡುವವರೆಗೆ ನಾವು ಸೈಟ್ ಗಳನ್ನು ತೋರಿಸುವುದಿಲ್ಲ)

**ಮನೆಗಳು ಮಾರಾಟಕ್ಕಿವೆ**
40x60 North, ಮೂರು ಬೆಡ್ ರೂಂ ಮನೆ, ಕುವೆಂಪು ಬಡಾವಣೆಯಲ್ಲಿ, 40x60 West, 4 ಬೆಡ್ ರೂಂ ಮನೆ, ಹೊಸ ಮನೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಕ್ಯಾಷಿಯರ್ ಬೇಕಾಗಿದ್ದಾರೆ**
ದಾವಣಗೆರೆ ನಗರದ ಪಿ.ಬಿ. ರಸ್ತೆಯ ಕೋರ್ಟ್ ಸರ್ಕಲ್‌ನಲ್ಲಿರುವ **ಟೇಸ್ಟ್ ಫಸ್ಟ್** ಹೋಟೆಲ್‌ಗೆ ಮಹಿಳಾ ಕ್ಯಾಷಿಯರ್ ಹಾಗೂ ಅಡುಗೆ ಭಟ್ರು (ನಾರ್ತ್ ಇಂಡಿಯನ್ ಶೈಲಿ) ಬೇಕಾಗಿದ್ದಾರೆ.
73488 22103

**ಬಿಲ್ಡಿಂಗ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಕೆ.ಆರ್. ರಸ್ತೆಗೆ ಹೊಂದಿಕೊಂಡಂತೆ ಎಸ್.ಎಸ್. ಆಸ್ಪತ್ರೆ ಪಕ್ಕ ನೀರಿನ ಟ್ಯಾಂಕ್ ಮುಂಭಾಗ ಮಹಾ ನಗರ ಪಾಲಿಕೆ ಡೋರ್ ನಂಬರ್‌ವುಳ್ಳ ಕಟ್ಟಡ ಅಳತೆ 11½×110ವುಳ್ಳ ಎರಡು ಅಂತಸ್ತಿನ ಬಿಲ್ಡಿಂಗ್ ಮಾರಾಟಕ್ಕಿದೆ. ಕೊಳ್ಳಲಿಚ್ಛಿಸುವವರು ಸಂಪರ್ಕಿಸಿ :
97439 78754

**ಸೈಟ್ ಮಾರಾಟಕ್ಕೆ**
S. S. 'B' 40x71 ಉತ್ತರ S.S. 'B' 30x40 ವೆಸ್ಟ್, ಬಾಪೂಜಿ ಸ್ಕೂಲ್ ಹಿಂಭಾಗ 40x50 ಕಾರ್ನರ್, ಕುವೆಂಪು ನಗರ 40x60 ಪೂರ್ವ ಸಿದ್ದವೀರಪ್ಪ 30x40 ಉತ್ತರ
ಕಿರಣ್ ಬೂಸ್ನೂರ್ (ಏಜೆಂಟ್)
98440 63409
(ಸೈಟ್ ಖರೀದಿಗೆ ಬೇಕೇ ವಿಚಾರಿಸಿ)

**ಸೈಟ್‌ಗಳು ಮಾರಾಟಕ್ಕಿವೆ**
60x40 North, ಸಿದ್ದ ವೀರಪ್ಪ ಬಡಾವಣೆಯಲ್ಲಿ, 70x62 South West Corner, ಡಾಲರ್ಸ್ ಕಾಲೋನಿಯಲ್ಲಿ, 30x44 North, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ, 30x50 East, ಹೊಸ ಬನಶಂಕರಿ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
ಶಾಮನೂರು ರಸ್ತೆ, ಬಾಟ್ಲಿ ಬಿಲ್ಡಿಂಗ್ ಹಿಂಭಾಗ, 5ನೇ ಕ್ರಾಸ್‌ನಲ್ಲಿ 'ಮರುಳಸಿದ್ದೇಶ್ವರ ನಿಲಯ'ದ 2ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
99161-88942, 74066-62460

**ಕುಂದುವಾಡ ಕೆರೆ ಪಕ್ಕ ಸೈಟ್‌ಗಳು ಮಾರಾಟಕ್ಕಿವೆ**
ಕುಂದುವಾಡ ಕೆರೆ ಪಕ್ಕ, ಕುಂದುವಾಡ ರಸ್ತೆ ಲೇಔಟ್‌ನಲ್ಲಿ ಪೂರ್ವ 30x55, 30x47, ಪಶ್ಚಿಮ 30x40, ಉತ್ತರ-ಪಶ್ಚಿಮ 25x47, ಮಹಾಲಕ್ಷ್ಮಿ ಲೇಔಟ್, ಶಿವಗಂಗೆ ಕಲ್ಯಾಣ ಮಂಟಪ ಹಿಂಭಾಗ ಪೂರ್ವ 30x40
ಐಗೂರು ವಿಜಯಕುಮಾರ್
99457 02495

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್.ಲೇಔಟ್ 'ಬಿ' ಬ್ಲಾಕ್ 4ನೇ ಮೇನ್, 7ನೇ ಕ್ರಾಸ್ (#5628/18) ನಲ್ಲಿ ಮೊದಲನೇ ಮಹಡಿಯಲ್ಲಿ ಸುಸಜ್ಜಿತ 2 BHK ಮನೆ ಬಾಡಿಗೆಗೆ ಇದೆ.
90084 18081

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ. ಎ ಬ್ಲಾಕ್ 4ನೇ ಮೇನ್, 3ನೇ ಕ್ರಾಸ್, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ, ಹಾಲ್ ಹಾಗೂ ಕಿಚನ್‌ವುಳ್ಳ ಮನೆ ಬಾಡಿಗೆಗೆ ಇದೆ. ಬೋರ್ ವೆಲ್ ಸೌಲಭ್ಯವಿರುತ್ತದೆ.
88619 94260

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ, ಅನುಭವವುಳ್ಳ ಎ.ಎನ್.ಎಂ ಆದವರು ಈ ಕೆಳಗಿನ ವಿಳಾಸಕ್ಕೆ ತಮ್ಮ ಬಯೋಡೇಟಾದೊಂದಿಗೆ ಬಂದು ವಿಚಾರಿಸಿ.
ವಿಳಾಸ : ಸ್ಟೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಚಿಗಟೇರಿ ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
99024-52312, 98450-35710

**ಮನೆ ಬಾಡಿಗೆಗಿದೆ**
3 BHK (25×40), Second Floor, ಮುನ್ಸಿಪಲ್ ಹಾಗೂ ಬೋರ್ ನೀರು ಸೌಕರ್ಯ ಇದೆ. #686/2, ಶ್ರೀರಾಮ ನಿವಾಸ ಪಿ.ಜೆ. ಬಡಾವಣೆ, 8ನೇ ಮುಖ್ಯರಸ್ತೆ, ಲೂರ್ಡ್ಸ್ ಬಾಯ್ಸ್ ಶಾಲೆ ಹತ್ತಿರ. ದಾವಣಗೆರೆ.
96325 55910, 87926 62185

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಡಿಸ್ಕೌಂಟ್ ಸೇಲ್**
ವಿವಿಧ ಇಂಟರ್ ನ್ಯಾಷನಲ್ ಬ್ರಾಂಡೆಡ್ ಐಟಂಗಳು ಶೇ. 70 ರವರೆಗೆ ಡಿಸ್ಕೌಂಟ್‌ನಲ್ಲಿ ದೊರೆಯುತ್ತವೆ. ಸ್ಟಾಕ್ ಇರುವವರೆಗೆ ಮಾತ್ರ. ತ್ವರೆ ಮಾಡಿ.
ಉದಯ ಸೂಪರ್ ಬಜಾರ್
ವಾಣಿ ರೈಸ್ ಮಿಲ್, ಹದಡಿ ರಸ್ತೆ, ದಾವಣಗೆರೆ.

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕಂಪನಿಗೆ ಎಂ.ಬಿ.ಎ. ಮಾರ್ಕೆಟಿಂಗ್ ಆದ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಕೌಶಲ್ಯವಿರುವ ಪುರುಷ ಅಭ್ಯರ್ಥಿಗಳು ಕೆಲಸ ಮಾಡಲು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಅನುಭವವಿಲ್ಲದವರೂ ಸಂಪರ್ಕಿಸಬಹುದು.
98809 33332

**ಮಾರಾಟಕ್ಕೆ**
SS ಲೇಔಟ್ ಸೈಟ್ - 40×58, ಮಹಾಲಕ್ಷ್ಮಿ ಲೇಔಟ್ ಸೈಟ್ (ಉತ್ತಮ್ ಚಂದ್ - ಪಶ್ಚಿಮ) 35×61, ಡಾಲರ್ಸ್ ಕಾಲೋನಿ ಸೈಟ್ (ದಕ್ಷಿಣ) 30×40, ಶಿಕ್ಷಕರ ಬಡಾವಣೆ 2ನೇ ಹಂತ (ದಕ್ಷಿಣ-ಆವರಗೆರೆ) 30×40, ಸಿದ್ದವೀರಪ್ಪ ಬಡಾವಣೆ ಸೈಟ್ (ಉತ್ತರ) 30×40, ಶಾಮನೂರು (ಶಿವ-ಪಾರ್ವತಿ) ಸೈಟ್ (ಪೂರ್ವ) 30×34,
78996 36597,99165 25828

**ಬೇಕಾಗಿದ್ದಾರೆ**
ಪಟಾಕಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಮೊ : 98453-52367
72591-33339

GST Registration-Returns Filing INCOME TAX & GST CASES, Project Reports and for Accounts Maintenances
Contact
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
ಅನುಭವವುಳ್ಳ ಸ್ಟಾಫ್ ನರ್ಸ್ ಬೇಕಾಗಿದ್ದಾರೆ.
99725 23910

**ಫ್ಯಾನ್ಸಿ ಸ್ಟೋರ್ ಮಾರಾಟಕ್ಕಿದೆ**
ಫ್ಯಾನ್ಸಿ ಸ್ಟೋರಿಗೆ ಸಂಬಂಧಿಸಿದ ಪೀಠೋಪಕರಣಗಳು, ಗ್ಲಾಸ್, ರ್‍ಯಾಕ್‌ಗಳು, ಸಿ.ಸಿ.ಟಿ.ವಿ. ಹಾಗೂ ಸಂಪೂರ್ಣ ಫ್ಯಾನ್ಸಿ ವಸ್ತುಗಳು ಮಾರಾಟಕ್ಕಿವೆ. (ಬಳೆಗಳು, ಮೇಕಪ್ ವಸ್ತುಗಳು ಮತ್ತು ಸ್ತ್ರೀಯರ ಸಂಪೂರ್ಣ ಅಲಂಕಾರಿಕ ವಸ್ತುಗಳು.)
83173 33269, 97433 61933

**ಜುಂಬಾ ಹಾಗೂ ಯೋಗ ತರಗತಿಗಳು**
ಆನ್‌ಲೈನ್ ಮುಖಾಂತರ ಜುಂಬಾ ಹಾಗೂ ಯೋಗ ತರಗತಿಗಳು ಕೇವಲ ರೂ. 199 ರಲ್ಲಿ ಆಸಕ್ತರು ಇಂದೇ ಸಂಪರ್ಕಿಸಿ
9097070333

**WANTED**
2 years Experienced in AUTO CADD 2D, 3D Drawing,
Shramajeevi machinctech
94497 74461

**ಮನೆ ಮಾರಾಟಕ್ಕಿದೆ**
ಎಸ್. ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗದ ಸಿದ್ದಗಂಗಾ ಬಡಾವಣೆಯಲ್ಲಿ ನೂತನವಾಗಿ ಸ್ವಂತಕ್ಕೆಂದು ಕಟ್ಟಿಸಿರುವ 30×33 ಅಳತೆಯ 2 ಬೆಡ್ ರೂಂ ಮನೆ ಮಾರಾಟಕ್ಕಿದೆ. ಮಹಡಿ ಮೇಲೆ ಬಾಡಿಗೆಗೆ ಬರುವಂತಹ ಎರಡು ಪ್ರತ್ಯೇಕ ಕೊಠಡಿಗಳಿವೆ. ಬೆಲೆ 55 ಲಕ್ಷ ರೂಗಳು
94820 94979

**ಮನೆ ಲೀಸ್‌ಗೆ ಇದೆ**
ಡಬಲ್ ರೂಂ, ಅಟ್ಯಾಚ್ ಬಾತ್‌ರೂಂ ಇರುವ ಮನೆ ಲೀಸ್‌ಗೆ ಇದೆ. ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, 4ನೇ ಮೇನ್, ಸಪ್ತಗಿರಿ ಸ್ಕೂಲ್ ಹತ್ತಿರ, ದಾವಣಗೆರೆ.
97425 37448
80730 07234

**WANTED**
1 computer operator any diploma Coputer science or B.E (Computer) can apply 2 Lab technician DMLT candidate can
apply call: 98440 65638

**DR. BHARGAV STEMCELL CENTER PVT. LTD.,**
Experiences *B.A.M.S. Duty doctor and Nurse for hospital near Davangere railway station IB Road. Attractive salary will be paid. Interested candidates kindly contact Mr.Shivanand, 9167165684 or mail your resume at DRBHARGAVSTEMCELLCENTER@GMAIL.COM

**Space For Rent**
Suitable for Corporate Office, Coachaing center, yoga Therapy, poly clinic etc. First & Second Floor Each 1600 sqft Prime location, 3rd main, P.J. Extn, Near Chethana hotel
98807 65683
97422 73362

**ಸೈಟ್ ಮಾರಾಟಕ್ಕೆ ಇದೆ**
30x50 Size, M.B. city Layout, Near Genesis Resort, Kundawada, Davanagere.
91488 84449

**ಜಮೀನು ಮಾರಾಟಕ್ಕಿದೆ**
NH-4 ರಸ್ತೆಗೆ (Corner)
ಬಾತಿ-ಹರಿಹರ ಮಧ್ಯೆ
(Buyers only Contact)
74112 50447

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ತಕ್ಷಣ ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ವಯಸ್ಸಾದ ತಾಯಿಯನ್ನು ನೋಡಿಕೊಳ್ಳಲು ಹಾಗೂ ಅಡುಗೆ ಮತ್ತು ಮನೆ ಕೆಲಸ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆವರೆಗೆ (ಲಿಂಗಾಯತ ಹೆಣ್ಣು ಮಕ್ಕಳಿಗೆ ಆದ್ಯತೆ) ತಕ್ಷಣ ಭೇಟಿ ಮಾಡಿರಿ. ಮೊಬೈಲ್ ನಂಬರ್
94496 79324

**WANTED TEACHERS IMMEDIATELY**
B.Sc B.Ed (CBZ)- 03 post
B.Sc B.Ed (PCM)- 03 post
SJM HIGH SCHOOL
Virakthamat, Doddapet, Davangere.
Contact: 99649 70221

**ಬ್ಯೂಟಿ ಪಾರ್ಲರ್ ಮತ್ತು ಟೈಲರಿಂಗ್, ಮೆಹಂದಿ ಕ್ಲಾಸ್ ಉಚಿತವಾಗಿ ಕಲಿಸಲಾಗುತ್ತದೆ.**
ಸಂಪರ್ಕಿಸಿ
79750 37312

**!! OFFER !!**
2 double bedsheet + 4 pillow cover @ Rs 500
5 double bedsheet + 10 pillow cover @ Rs 1000
The Home Store
Near shantala silks, Chamrajpet, Davangere
98453 85809

**ಮನೆ ಬಾಡಿಗೆಗಿದೆ**
ದಾವಣಗೆರೆ K.B ಬಡಾವಣೆ ಬಳ್ಳಾರಿ ಸಿದ್ದಮ್ಮ ಪಾರ್ಕ್ ಎದುರು 1ನೇ ಮುಖ್ಯ ರಸ್ತೆ, ಗ್ರೌಂಡ್ ಫ್ಲೋರ್ ಕಾರ್ನರ್‌ನಲ್ಲಿ 2 ಬೆಡ್ ರೂಂಗಳಿರುವ, ನೀರಿನ ಸೌಲಭ್ಯವಿರುವ ಸುಸಜ್ಜಿತ ಮನೆ ಖಾಲಿ ಇದೆ. ಆಸಕ್ತರು ವಿಚಾರಿಸಿರಿ. ದಾವಣಗೆರೆ.
78923 11369, 98442 53948

**AVOID MOSQUITOES**
Mosquito Net For Doors & Windowes. Design Boards, ACP, MDF Available.
SRI GOWRI ENTERPRISES
# 7, 4th Cross, Karur Industrial Area. Davangere-6
72049 94628

**ಶಿಕ್ಷಕಿಯರು ಬೇಕಾಗಿದ್ದಾರೆ**
Teacher's Wanted
D.Ed., Bsc.,B.Ed., B.A., B.Com., Bsc., NTC
TAHSEEN CONVENT
Razaul Mustafa Nagar, Davangere.
93411 19195, 99800 32237

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಸಮೀಪದ ಐಗೂರು ಗ್ರಾಮದಲ್ಲಿ 2 ಎಕರೆ ಜಮೀನು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
86609 72049

**ಉದ್ಯೋಗಾವಕಾಶ**
ಸಂಜೀವಿನಿ ಹೋಂ ನರ್ಸಿಂಗ್ ಸರ್ವೀಸ್ ನಮ್ಮ ಕಂಪನಿಯಲ್ಲಿ ಯುವತಿಯರಿಗೆ ಮತ್ತು ವಿಧವಾ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಿ ಉದ್ಯೋಗವನ್ನು ಕಲ್ಪಿಸಿ ಕೊಡಲಾಗುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ.
ವಿದ್ಯಾರ್ಹತೆ: 7th, 10th, PUC (pass/fail), any Degree
ಸಂಬಳ: 10,000 ರಿಂದ 15,000 ಉಚಿತ ವಸತಿಯೊಂದಿಗೆ
91486 83185

**WANTED**
Marketing Excutives, Supervisors
Contact: Krushi Tarpaulins
Opp Relaince Market, P.B. Road, Davanagere.
Call: 91087 11555

**ಕುರಿಗಳು ಮಾರಾಟಕ್ಕಿವೆ**
Rs. 300 per kg
Phone no:
94482 29430

NGO-ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
X-Ray Technician ಬೇಕಾಗಿದ್ದಾರೆ. (Digital CR)
78995 52372

**ವಾಸದ ಮನೆ ಬಾಡಿಗೆಗೆ ಇದೆ**
2BHK, Ground Floor, T.C. Layout, Near Mahaveer Bhavan, 24 Hours water supply, fully equipped. Contact
96203 20109

**WANTED**
BANKING SECTOR TELE CALLERS (Female Only)
Qualification: any Degree
Contact No: 78929 94180
Address: # 3367/1 Arunodaya, MCC B Block, Shamanuru Road,opp Ashraya hospital, Davanagere-577006

**ಬೇಕಾಗಿದ್ದಾರೆ**
ಮನೆಯಲ್ಲಿ ಸಸ್ಯಹಾರಿ ಅಡುಗೆ ಮಾಡಲು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ: # 1717/19, ಸುಮಂಗಲಿ ನಿಲಯ, 5ನೇ ಮೇನ್, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ.
98804 36414

**State Bank of India 'ಜನ್‌ಧನ್ ಖಾತೆ' ಮಾಡಲಾಗುತ್ತದೆ**
(10 ವರ್ಷ ಮೇಲಿನವರಿಗೆ)
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ or any ಡಿಗ್ರಿ, ವಯಸ್ಸು 18 ವರ್ಷ ಮೇಲ್ಪಟ್ಟು, ಯುವಕ-ಯುವತಿಯರು ಬೇಕಾಗಿದ್ದಾರೆ. ರೂ 9,000 - 12,000 ವರೆಗೆ. ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು ಹಾಗೂ ಯುವಕರಿಗೆ ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್., ಆರ್.ಸಿ. ಕಾರ್ಡ್ ಹೊಂದಿರಬೇಕು.
Ph : 8951455892, 99023 42040
ಅಡ್ರೆಸ್ : ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್, ಲಕ್ಷ್ಮಿ ಲೇಔಟ್, ದಾವಣಗೆರೆ.

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non-Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859, 87620 58369, 82173 02649, 80507 27467

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**SITE FOR SALE**
600 Mtrs from RTO Office at 1499/- Per Sq/ft only 2 sites, East-West Facing
88844 19930
88844 19932

**JOBS**
MCS ACADEMY
Training & Placement Cell
98444 92888

**TO-LET**
3 Bed Room House (First Floor) 14th Cross, Siddaveerappa Badavane
98868 44501

**ಸಕ್ಕರೆ ಕಾಯಿಲೆ ಗುಣಮುಖ ಖಚಿತ**
* ಸಕ್ಕರೆ ಕಾಯಿಲೆ * ಪಾದದ ಹುಣ್ಣು
* ಬಂಜೆತನ * ಬೊಜ್ಜು
* ಹೃದಯಾಘಾತಗಳ ತಡೆ
* ಬೊಜ್ಜು ಮತ್ತು ಸಕ್ಕರೆ ಕಾಯಿಲೆ ಸಂಬಂಧಿತ 14 ವಿಧದ ಕ್ಯಾನ್ಸರ್‌ಗಳು ಒಳಗೊಂಡಿರುತ್ತವೆ
* ಸ್ವಯಂ ನಿರೋಧಕ ರೋಗಗಳು.
ಗುಣಪಡಿಸಲು ವಿಫಲವಾದರೆ 10 ಲಕ್ಷ ರೂ. ದಂಡವಿದೆ
ಸಮಯ : 1.30 ರಿಂದ 3.30 pm
ಡಾ॥ ಬಸವರಾಜ್ ಮುದೇಗೌಡ್ರ
MBBS, DVD, MD.,
99005 61014 ,+9 74502 24550


# 2.42 ಕೋಟಿ ಜನರಿಗೆ ಲಸಿಕೆ

**(1ನೇ ಪುಟದಿಂದ)** ಆಗಸ್ಟ್ 31 ಹಾಗೂ ಆಗಸ್ಟ್ 27ರಂದು ದೇಶದಲ್ಲಿ ನೀಡಲಾದ ಕೊರೊನಾ ಲಸಿಕೆಯ ಪ್ರಮಾಣ ಒಂದು ಕೋಟಿಗೂ ಹೆಚ್ಚಾಗಿತ್ತು.

ದೊಡ್ಡ ಸಂಖ್ಯೆಯ ಜನರು ಲಸಿಕೆ ಪಡೆಯಲು ಶುಕ್ರವಾರದಂದು ನೆರವು ನೀಡುವಂತೆ ಬಿಜೆಪಿ ತನ್ನ ಕಾರ್ಯಕರ್ತರಿಗೆ ಕರೆ ನೀಡಿತ್ತು.

ದೇಶದಲ್ಲಿ ಮೊದಲ 10 ಕೋಟಿ ಜನರಿಗೆ ಲಸಿಕೆ ನೀಡಲು 85 ದಿನಗಳು ಬೇಕಾಗಿದ್ದವು. ನಂತರ ಹತ್ತು ಕೋಟಿ ಲಸಿಕೆಯನ್ನು 45 ದಿನಗಳಲ್ಲಿ ನೀಡಲಾಗಿತ್ತು. ಆನಂತರದಲ್ಲಿ 29 ದಿನಗಳಲ್ಲಿ ಹತ್ತು ಕೋಟಿ ಜನರಿಗೆ ಲಸಿಕೆ ನೀಡಲಾಗಿತ್ತು.

ಸೆಪ್ಟೆಂಬರ್ 7ರ ನಂತರ ಕೇವಲ 13 ದಿನಗಳಲ್ಲಿ ಹತ್ತು ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಶುಕ್ರವಾರದಂದು ಅತಿ ಹೆಚ್ಚು ಲಸಿಕೆ ನೀಡಿದ ರಾಜ್ಯಗಳ ಪಟ್ಟಿಯಲ್ಲಿ ಬಿಹಾರ, ಕರ್ನಾಟಕ, ಉತ್ತರ ಪ್ರದೇಶ, ಮಧ್ಯಪ್ರದೇಶ ಹಾಗೂ ಗುಜರಾತ್‌ಗಳಿವೆ. ಆಸಕ್ತಿಕರ ಅಂಶವೆಂದರೆ ಈ ಎಲ್ಲ ರಾಜ್ಯಗಳಲ್ಲೂ ಬಿಜೆಪಿ ಆಡಳಿತದಲ್ಲಿದೆ.

## ಜಿಲ್ಲೆಯಲ್ಲಿ 93 ಸಾವಿರ ಜನರಿಗೆ ಲಸಿಕೆ

**(1ನೇ ಪುಟದಿಂದ)** ಮೋದಿಯವರು ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

**ನಕಲಿ ಹಿಂದೂವಾದಿಗಳಲ್ಲ:** ಬಿಜೆಪಿ ಹಿಂದುತ್ವದಿಂದಲೇ ಬಂದ ಪಕ್ಷ ಎನ್ನುವುದು ಸತ್ಯ. ಆದರೆ ನಕಲಿ ಹಿಂದೂವಾದಿಗಳು ಎನ್ನುವುದು ಸುಳ್ಳು. ಇದು ಕಾಂಗ್ರೆಸ್‌ನವರ ಆರೋಪ ಮಾತ್ರ ಎಂದು ಸಂಸದ ಸಿದ್ದೇಶ್ವರ ಹೇಳಿದರು.

ಇತ್ತೀಚೆಗೆ ಸಾರ್ವಜನಿಕ ಪ್ರದೇಶಗಳಲ್ಲಿರುವ ದೇವಾಲಯಗಳ ತೆರವಿಗೆ ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಆದರೆ ದೇವಾಲಯಗಳನ್ನು ಒಡೆದಿರುವುದು ಆಕಸ್ಮಿಕವಾಗಿ ನಡೆದ ಘಟನೆ. ಇದನ್ನು ನಾನೂ ಖಂಡಿಸುತ್ತೇನೆ. ಸ್ಥಳೀಯ ಸಂಸದರು, ಶಾಸಕರು, ಜನಪ್ರತಿನಿಧಿಗಳು ಹಾಗೂ ಧಾರ್ಮಿಕ ಮುಖಂಡರುಗಳ ವಿಶ್ವಾಸ ತೆಗೆದುಕೊಂಡು ಕೆಲಸ ಮಾಡಬೇಕು ಎಂದು ಹೇಳಿದರು.

ರಾಂಪುರ-ಹೆದ್ನೆ ರಸ್ತೆ ದುರಸ್ತಿ ಮಾಡದೆ ಯುವತಿ ಯೊಬ್ಬಳು ಮದುವೆ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದ ವಿಷಯವನ್ನು ಪತ್ರಿಕೆಗಳಲ್ಲಿ ನೋಡಿ, ಪರಿಶೀಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೆ. ಅವರು ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿದ್ದಾರೆ. ಈಗಾಗಲೇ ರಸ್ತೆ ಕಾಮಗಾರಿ ಆರಂಭವಾಗಿದೆ ಎಂದರು.

ಚುನಾವಣೆ ವೇಳೆ ತಮ್ಮ ಪತ್ನಿ ರಾಂಪುರಕ್ಕೆ ಮತ ಯಾಚನೆಗೆ ತೆರಳಿದ್ದ ಸಂದರ್ಭದಲ್ಲಿ ಜನರು ರಸ್ತೆ ರಿಪೇರಿ ಮಾಡಿಸುವಂತೆ ಹೇಳಿದ್ದರು. ನಾನು ಗೆದ್ದ ನಂತರ ನನ್ನ ಪತ್ನಿಯ ಪ್ರಥಮ ಬೇಡಿಕೆ ರಸ್ತೆ ರಿಪೇರಿ ಮಾಡಿಸುವುದೇ ಆಗಿತ್ತು. ಆಗ ರಸ್ತೆ ಮೆಟ್ಲಿಂಗ್ ಮಾಡಿಸಲಾಗಿತ್ತು. 1.3 ಕಿ.ಮೀ. ನಷ್ಟು ರಸ್ತೆ ಮಾತ್ರ ಹಾಳಾಗಿತ್ತು. ಇದೀಗ ಅದೂ ಸರಿಯಾಗಲಿದೆ ಎಂದು ಹೇಳಿದರು.

ನಂತರ ನಗರದ ಮೋತಿವೀರಪ್ಪ ಕಾಲೇಜು ಹಾಗೂ ಸೂಪರ್ ಮಾರ್ಕೆಟ್ ಕೇಂದ್ರಗಳ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿ ವೀಕ್ಷಿಸಿದ ಸಂಸದರು, ಜಿಲ್ಲಾಧಿಕಾರಿಗಳು ಫಲಾನುಭವಿಗಳ ಯೋಗಕ್ಷೇಮ ವಿಚಾರಿಸಿದರು.

**ದೊಗ್ಗಳ್ಳಿ ಕಾಂಪೌಂಡ್‌ಗೆ ಭೇಟಿ :** ನಗರದ ದೊಗ್ಗಳ್ಳಿ ಕಾಂಪೌಂಡ್‌ಗೆ ಭೇಟಿ ನೀಡಿ, ಅಲ್ಲಿನ ಕೊಳಚೆ ಪ್ರದೇಶವನ್ನು ವೀಕ್ಷಿಸಿದ ಸಂಸದರು, ಅಲ್ಲಿನ ಜನರಿಗೆ ಕೊಳಚೆ ಪ್ರದೇಶದಲ್ಲಿ ಓಡಾಡಲು ಸಾಧ್ಯವಾಗುತ್ತಿಲ್ಲ. ಮಳೆಗಾಲದಲ್ಲಿ ನೀರು ಶೇಖರಣೆಯಾಗಿ ಸುತ್ತ-ಮುತ್ತಲಿನ ಪ್ರದೇಶ ಮಲಿನಗೊಂಡಿದ್ದು, ಜನರು ಜೀವಿಸಲು ಕಷ್ಟಕರವಾಗಿದೆ. ಕೂಡಲೇ ಈ ಸ್ಥಳವನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಸುವ್ಯವಸ್ಥಿತ ರಸ್ತೆ ಹಾಗೂ ಯುಜಿಡಿ ವ್ಯವಸ್ಥೆ ಕಲ್ಪಿಸಬೇಕು ಎಂದು ಮಹಾನಗರ ಪಾಲಿಕೆಯ ಆಯುಕ್ತರಿಗೆ ಸೂಚಿಸಿದರು.

ಮಾಜಿ ಶಾಸಕ ಬಸವರಾಜ ನಾಯ್ಕ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್, ಪಾಲಿಕೆ ಸದಸ್ಯೆ ಗೀತಾ ದಿಳ್ಯೆಪ್ಪ, ದಿಳ್ಯೆಪ್ಪ, ಡಿಹೆಚ್‌ಓ ಡಾ. ನಾಗರಾಜ್, ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

## ಜೊಮ್ಯಾಟೋ, ಸ್ವಿಗ್ಗಿ ಜಿಎಸ್‌ಟಿ

**(1ನೇ ಪುಟದಿಂದ)** ಜನವರಿ 1ರಿಂದ ಆಹಾರ ಪೂರೈಸುವ ಆಪ್‌ಗಳು ಶೇ.5ರ ಜಿ.ಎಸ್.ಟಿ. ಸಂಗ್ರಹಿಸಿ ಸರ್ಕಾರಕ್ಕೆ ಪಾವತಿಸಬೇಕಿದೆ. ಆದರೆ, ರೆಸ್ಟೋರೆಂಟ್‌ಗಳು ಇದುವರೆಗೂ ವಸೂಲಿ ಮಾಡುತ್ತಿರುವ ಹಣವನ್ನೇ ಆಪ್‌ಗಳು ವಸೂಲಿ ಮಾಡಲಿವೆ. ಇದರಿಂದಾಗಿ ಗ್ರಾಹಕರ ಮೇಲೆ ಹೆಚ್ಚಿನ ಹೊರೆಯಾಗುವುದಿಲ್ಲ.

ಜಿ.ಎಸ್.ಟಿ. ಜಾರಿಗೆ ತಂದ ನಂತರ ರಾಜ್ಯಗಳಿಗೆ ಆಗುತ್ತಿರುವ ನಷ್ಟವನ್ನು ಸರಿದೂಗಿಸುವ ವ್ಯವಸ್ಥೆಯನ್ನು ಮುಂದಿನ ವರ್ಷ ಜೂನ್‌ಗೆ ಅಂತ್ಯಗೊಳಿಸಲು ನಿರ್ಧರಿಸಲಾಗಿದೆ. ಆದರೆ, ಕೆಲ ಸರಕುಗಳ ಮೇಲೆ ಜಿ.ಎಸ್.ಟಿ. ಮೀರಿ ಸೆಸ್ ವಿಧಿಸುವುದು ಮಾರ್ಚ್ 2026ರವರೆಗೆ ಮುಂದುವರೆಯಲಿದೆ. ಈ ಹಣವನ್ನು 2020-21ರವರೆಗೆ ರಾಜ್ಯಗಳಿಗೆ ನೀಡಬೇಕಾದ ಪರಿಹಾರಕ್ಕೆ ಬಳಸಲಾಗುವುದು.

ರೆಮ್ಡಿಸಿವಿರ್ ಹಾಗೂ ತೊಸಿಲಿಜುಮ್ಯಾಬ್ ರೀತಿಯ ಔಷಧಿಗಳಿಗೆ ಜಿ.ಎಸ್.ಟಿ. ವಿನಾಯಿತಿ ನೀಡುವುದನ್ನು ಡಿಸೆಂಬರ್ 31ರವರೆಗೆ ಮುಂದುವರೆಸಲಾಗಿದೆ. ಫಾವಿಪಿರಾವಿರ್ ರೀತಿಯ ಔಷಧಿಗಳಿಗೆ ಡಿಸೆಂಬರ್ 31ರವರೆಗೆ ಶೇ.5ರ ವಿನಾಯಿತಿ ದರದ ತೆರಿಗೆ ವಿಧಿಸಲಾಗುವುದು. ಆದರೆ, ಔಷಧೀಯ ಉಪಕರಣಗಳಿಗೆ ನೀಡಲಾಗಿರುವ ತೆರಿಗೆ ವಿನಾಯಿತಿ ಸೆಪ್ಟೆಂಬರ್ 30ಕ್ಕೆ ಅಂತ್ಯವಾಗಲಿದೆ.

## ಪಂಚಮಸಾಲಿ : ಹರಿಹರದಲ್ಲಿ ರ್‍ಯಾಲಿ

ಹರಿಹರ ತಾಲ್ಲೂಕು ಪಂಚಮಸಾಲಿ ಸಮಾಜ ವತಿಯಿಂದ ಪಂಚಮಸಾಲಿ ಸಮಾಜಕ್ಕೆ 2A ಮೀಸಲಾತಿಗೆ ಆಗ್ರಹಿಸಿ, ಇಂದು ಬೆಳಿಗ್ಗೆ 10.30ಕ್ಕೆ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಪ್ರತಿಭಟನಾ ಮೆರವಣಿಗೆ ಹೊರಟು ತಹಶೀಲ್ದಾರರಿಗೆ ಹಕ್ಕೊತ್ತಾಯದ ಮನವಿ ಸಲ್ಲಿಸಲಾಗುವುದು ಎಂದು ದೀಟೂರು ಚಂದ್ರಶೇಖರಪ್ಪ ತಿಳಿಸಿದ್ದಾರೆ.

## ಬಿಜೆಪಿ ಕಾರ್ಯಕಾರಿಣಿ ಸಭೆ

**(1ನೇ ಪುಟದಿಂದ)** ಅಲಂಕಾರ ಮಾಡಲಾಗಿದೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅರುಣ್ ಸಿಂಗ್, ಬಿ.ಎಲ್. ಸಂತೋಷ್, ಸಿ.ಟಿ. ರವಿ, ಡಿ.ಕೆ. ಅರುಣಾ, ಸದಾನಂದಗೌಡ, ಜಗದೀಶ್ ಶೆಟ್ಟರ್, ಶೋಭಾ ಕರಂದ್ಲಾಜೆ, ಭಗವಂತ ಖೂಬಾ, ನಾರಾಯಣ ಸ್ವಾಮಿ ಮತ್ತಿತರರು ಸಭೆಗೆ ಆಗಮಿಸಲಿದ್ದಾರೆ.

ಸಭೆಗೆ 574 ಅಪೇಕ್ಷಿತರ ಪೈಕಿ ಕನಿಷ್ಠ 540 ಜನರು ಆಗಮಿಸುವ ನಿರೀಕ್ಷೆ ಇದೆ. ಬರುವವರಿಗೆ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ವಸತಿಗೆ ಅವಕಾಶ ಕಲ್ಪಿಸಲಾಗಿದ್ದು ಬೆಣ್ಣೆ ದೋಸೆ, ಮಂಡಕ್ಕಿ ಮಿರ್ಚಿ, ರೊಟ್ಟಿ ಊಟ ಮಂತಾದ ವ್ಯವಸ್ಥೆ ಮಾಡಲಾಗಿದೆ ಎಂದರು.

19 ರಂದು ಬೆಳಿಗ್ಗೆ 10 ಗಂಟೆಗೆ ಧ್ವಜಾರೋಹಣ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ಸಭೆಗೆ ಆಗಮಿಸುವ ಮುಖಂಡರನ್ನು 71 ಪೂರ್ಣ ಕುಂಭಗಳೊಂದಿಗೆ ಸ್ವಾಗತಿಸಲಾಗುವುದು ಎಂದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಪ್ರಧಾನ ಕಾರ್ಯದರ್ಶಿ ಡಿ.ಎಸ್. ಜಗದೀಶ್, ದೂಡಾ ಅಧ್ಯಕ್ಷ ಶಿವಕುಮಾರ್ ದೇವರಮನೆ, ಶ್ರೀನಿವಾಸ ದಾಸಕರಿಯಪ್ಪ, ಬಾತಿ ವೀರೇಶ್, ಡಿ.ಎಸ್. ಶಿವಶಂಕರ್, ಯಶವಂತರಾವ್ ಜಾಧವ್ ಹಾಗೂ ಇತರರು ಉಪಸ್ಥಿತರಿದ್ದರು.

## ಪ.ಪಂ. ಮೂಲ ಸೌಕರ್ಯಕ್ಕೆ ಹಣ

**(1ನೇ ಪುಟದಿಂದ)** ಅನುದಾನವನ್ನು ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಬಳಕೆ ಮಾಡಿಕೊಳ್ಳುವಂತೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮೇಲ್ದರ್ಜೆಗೊಂಡ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ವಿಲೇವಾರಿ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಯೋಜನೆ ರೂಪಿಸಿ ಕಾಮಗಾರಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಹಾಗೂ ಇಲಾಖಾ ಅಧಿಕಾರಿಗಳಿಗೆ ಆದೇಶ ಮಾಡಲಾಗುವುದು ಎಂದವರು ಹೇಳಿದರು.

ಇದಕ್ಕೂ ಮುಂಚೆ ಮಾತನಾಡಿದ ದೇವೇಗೌಡ, ಕಳೆದ ಆರು ತಿಂಗಳ ಹಿಂದೆ ಪಟ್ಟಣ ಪಂಚಾಯತ್, ನಗರಸಭೆಗಳಿಗೆ, ಉನ್ನತೀಕರಿಸಿದ ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ನೆರವು ಇಲ್ಲದೆ ನಿಷ್ಕ್ರಿಯಗೊಂಡಿವೆ. ಇದರಿಂದ ತ್ಯಾಜ್ಯ ವಿಲೇವಾರಿ ಆಗುತ್ತಿಲ್ಲ, ನಗರ ಸ್ವಚ್ಛತಾ ಕಾರ್ಯ ಕೈಗೊಳ್ಳುವವರು ವೇತನ ಇಲ್ಲದೆ ಪರದಾಡುತ್ತಿದ್ದಾರೆ.

ಈ ಹಿಂದೆ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದವರು ನಮಗೂ ಇದಕ್ಕೂ ಸಂಬಂಧ ಇಲ್ಲವೆಂದು ಕೈಚೆಲ್ಲಿದ್ದಾರೆ. ನೌಕರರೂ ಇಲ್ಲ, ಇವುಗಳ ಸ್ಥಿತಿ ಚಿಂತಾಜನಕವಾಗಿದೆ ಎಂದು ಎಳೆ ಎಳೆಯಾಗಿ ಬಿಡಿಸಿಟ್ಟರು.

ಮೇಲ್ದರ್ಜೆಗೇರಿಸಿದ ನಂತರ ಇವುಗಳ ಆಡಳಿತ ಸಂಪೂರ್ಣ ನಿಷ್ಕ್ರಿಯಗೊಂಡಿದೆ, ಇದರಿಂದ ಜನಜೀವನ ಸಂಪೂರ್ಣ ಅಸ್ವಸ್ಥಗೊಂಡು ಸ್ವಚ್ಛತಾ ಕಾರ್ಯ ನಡೆಯುತ್ತಿಲ್ಲ.

ನಾವು ಯಾತಕ್ಕಾದರೂ ಇವುಗಳನ್ನು ಮೇಲ್ದರ್ಜೆಗೆ ಏರಿಸಿದೆವೋ ಎಂಬ ಪ್ರಶ್ನೆ ಕಾಡುತ್ತಿದೆ. ತಕ್ಷಣ 10 ಕೋಟಿ ರೂ. ಬಿಡುಗಡೆ ಮಾಡಿ ಮೂಲಸೌಕರ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಶಾಸಕರ ಮಾತಿಗೆ ಮಣಿದ ಸಚಿವರು, ಈ ಸಂಬಂಧ ಮೈಸೂರು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲೇ ಸಭೆ ನಡೆಸಿ ಈ ನಾಲ್ಕೂ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಭರವಸೆ ನೀಡಿದರು.


**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or Any Degree.
ವಿಳಾಸ :
ಕಾವೇರಿ ಮೆಡಿಹೌಸ್ ಪ್ರೈ.ಲಿ.
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577 002.

**ಬೇಕಾಗಿದ್ದಾರೆ**
ಮಹಿಳಾ ಅಕೌಂಟೆಂಟ್ ಬೇಕಾಗಿದ್ದಾರೆ
B.Com., ಅನುಭವವುಳ್ಳವರಿಗೆ ಆದ್ಯತೆ
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
ಆಲೂರು ಚಂದ್ರಶೇಖರ ಹಾಸ್ಪಿಟಲ್ ಪಕ್ಕ ಕಾಲೇಜ್ ರೋಡು P.J. Ext. ದಾವಣಗೆರೆ.
73494 51224

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ
93410 12022

**ಬಾಡಿಗೆಗೆ ಇದೆ**
ವಾಣಿಜ್ಯ ಮಳಿಗೆಗಳು ಮೋತಿ ನಗರ ಬಾಡಾ ಕ್ರಾಸ್ ಹತ್ತಿರ, ಡೋರ್ ನಂ. 358/5, 35x35 ಹಾಗೂ 50x32 ಅಳತೆಯ ಮಳಿಗೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
97384 17534


## ಒಂಭತ್ತನೇ ವರ್ಷದ ಸವಿನೆನಪು



**ಶ್ರೀ ಹನುಮಗೌಡ ಜಿ.ಆರ್**

ಗುಡ್ಡದ ಬೇವಿನಹಳ್ಳಿ, ನಂದೀಶ್ ಫರ್ಟಿಲೈಜರ್ಸ್‌ಮಾಲೀಕರು.

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.

ಸದಾ ನಿನ್ನ ನೆನಪು ನಮ್ಮ ಮನದಲ್ಲಿ ಅಚ್ಚಳಿಯದೇ ನೆಲೆಸಿದೆ.

ಸದಾ ನಿನ್ನನ್ನು ನೆನಪಿಸಿಕೊಳ್ಳುತ್ತಿರುವ ನಿನ್ನ

✦ ತಂದೆ : ಜಿ.ರುದ್ರೇಗೌಡ ✦ ತಾಯಿ: ಗೌರಮ್ಮ

✦ ಪತ್ನಿ : ಪವಿತ್ರ ✦ ಮಗ : ಸಮರ್ಥ

✦ ಅಕ್ಕ : ಸುಧಾ ಪರಮೇಶ್ವರಪ್ಪ ✦ ತಂಗಿ : ಮೇನಕಾ ಬಸವರಾಜ್

## ಹಂಪಣ್ಣ ಮರಿಸ್ವಾಮಿ ನಿಧನ



ದಾವಣಗೆರೆ ವಿನೋಬನಗರ 2ನೇ ಮೇನ್, 3ನೇ ಕ್ರಾಸ್ ವಾಸಿ, ಮಂಡಿಪೇಟೆ ಹಂಪಣ್ಣ ಬೀಡಾ ಸ್ಟಾಲ್ ಮಾಲೀಕರಾದ

**ಶ್ರೀ ಹಂಪಣ್ಣ ಮರಿಸ್ವಾಮಿ**

ಇವರು ದಿನಾಂಕ 17.09.2021ರ ಮಧ್ಯಾಹ್ನ 12 ಗಂಟೆಗೆ ನಿಧನರಾದರು. ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.09.2021ರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು ಕುಟುಂಬ ವರ್ಗ

## ಭಾನುವಳ್ಳಿ ಗ್ರಾಮದ ಹಣಚಿಕ್ಕಿ ಮಲ್ಲಮ್ಮ ನಿಧನ



ಹರಿಹರ ತಾ, ಭಾನುವಳ್ಳಿ ಗ್ರಾಮದ ದಿ. ಹಣಚಿಕ್ಕಿ ಸಣ್ಣ ಕೆಂಚಪ್ಪನವರ ಧರ್ಮಪತ್ನಿ

**ಶ್ರೀಮತಿ ಮಲ್ಲಮ್ಮ** (85 ವರ್ಷ)

ಇವರು ದಿನಾಂಕ 17.09.2021ರ ಶುಕ್ರವಾರ ರಾತ್ರಿ 8.45ಕ್ಕೆ ನಿಧನರಾದರು. ಹರಿಹರ ತಾ. ಪಂ ಮಾಜಿ ಅಧ್ಯಕ್ಷರಾದ ಹೆಚ್. ಕೆ. ಕನ್ನಪ್ಪ ಸೇರಿದಂತೆ ಐವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.09.2021ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಭಾನುವಳ್ಳಿ ಗ್ರಾಮದಲ್ಲಿ ನೆರವೇರಲಿದೆ.

## ಡಾ. ಶಶಿಕಲಾಗೆ 'ಶ್ರೇಷ್ಠ ವೈದ್ಯ ಸಾಹಿತಿ' ಪ್ರಶಸ್ತಿ



ದಾವಣಗೆರೆ, ಸೆ.17 - ಐ.ಎಂ.ಎ ಕನ್ನಡ ಬರಹಗಾರರ ಸಮಿತಿ ರಾಜ್ಯ ಶಾಖೆಯಿಂದ 2019-20 ಹಾಗೂ 2020-21ನೇ ಸಾಲಿನ 'ಶ್ರೇಷ್ಠ ವೈದ್ಯ ಸಾಹಿತಿ ಪ್ರಶಸ್ತಿ'ಗೆ ವೈದ್ಯ ಸಾಹಿತಿಗಳನ್ನು ಆಯ್ಕೆ ಮಾಡಲಾಗಿದೆ.

2019-2020 ನೇ ಸಾಲಿಗೆ ಹೊನ್ನಾವರದ ಡಾ. ಹೆಚ್.ಎಸ್. ಅನೂಪಮ ಹಾಗೂ ಸಾಗರದ ಹೆಚ್.ಎಸ್.ಮೋಹನ್, 2020-21ನೇ ಸಾಲಿಗೆ ದಾವಣಗೆರೆಯ ಎಸ್.ಎಸ್. ಆಸ್ಪತ್ರೆ ಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ ಹಾಗೂ ಹುಬ್ಬಳ್ಳಿಯ ಡಾ.ವಿ.ಜಿ. ಕುಲಕರ್ಣಿ ಅವರುಗಳು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಐ.ಎಂ.ಎ ರಾಜ್ಯಾಧ್ಯಕ್ಷ ಡಾ.ವೆಂಕಟಾಚಲಪತಿ ಹಾಗೂ ಸಮಿತಿಯ ಅಧ್ಯಕ್ಷ ಡಾ.ಅಣ್ಣಯ್ಯ ಕುಲಾಲ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವೈದ್ಯ ಸಾಹಿತಿಗಳನ್ನು ಗುರುತಿಸಿ, ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಬೆಂಗಳೂರಿನಲ್ಲಿ ಬರುವ ಅಕ್ಟೋಬರ್ 3 ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

## 14, 35ನೇ ವಾರ್ಡುಗಳಲ್ಲಿ ಅತೀ ಹೆಚ್ಚು ಲಸಿಕೆ




ದಾವಣಗೆರೆ,ಸೆ.17 - ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂದು ನಡೆದ ಕೋವಿಡ್ ಬೃಹತ್ ಲಸಿಕಾ ಶಿಬಿರದಲ್ಲಿ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಮಹಾನಗರ ಪಾಲಿಕೆ ಸದಸ್ಯ ಕೆ. ಚಮನ್ ಸಾಬ್ ಅವರ 14ನೇ ವಾರ್ಡ್ ಮತ್ತು ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ ಅವರ 35ನೇ ವಾರ್ಡಿನಲ್ಲಿ ಅತೀ ಹೆಚ್ಚು ಲಸಿಕೆ ನೀಡಲಾಗಿದೆ.

14ನೇ ವಾರ್ಡಿನಲ್ಲಿ 808 ಜನರಿಗೆ ಮತ್ತು 35ನೇ ವಾರ್ಡಿನಲ್ಲಿ 640 ಜನರಿಗೆ ಲಸಿಕೆ ನೀಡಲಾಗಿದೆ.


FURNITURE DISCOUNT SHOPPING FESTIVAL

FURNITURE WORLD

ಫರ್ನಿಚರ್ ಟುಡೇ
ಲೈಫ್ ಸ್ಟೈಲ್ ಎಕ್ಸಿಬಿಷನ್

ನಿಮ್ಮ ಹಳೆಯ ಫರ್ನಿಚರ್ ಎಕ್ಸ್‌ಚೇಂಜ್ ಮಾಡಲಾಗುವುದು ಹಾಗೂ ಮನೆ ಅಳತೆ ಪ್ರಕಾರ ಸೋಫಾಗಳನ್ನು ರೆಡಿ ಮಾಡಿಕೊಡಲಾಗುವುದು.

MEGA EXCHANGE OFFER

UP to 50% OFF

ಸಮಯ: ಬೆಳಿಗ್ಗೆ 10.30 ರಿಂದ ರಾತ್ರಿ 9.30 ರವರೆಗೆ

ಸೆ.21ರ ಮಂಗಳವಾರ ಕೊನೆಯ ದಿನ.

ಸ್ಥಳ: ಸರ್ಕಾರಿ ನೌಕರರ ಸಮುದಾಯ ಭವನ, ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್ ಸರ್ಕಲ್, ದಾವಣಗೆರೆ.

9731589012




LASER CUTTING WORKS

Sheet metal Laser cutting up to 18mm thickness in mild steel, 8mm in stainless steel, 6 mm in aluminium, 4 mm in copper, 4mm in brass with smooth finish and accuracy of ± 0.1 to 0.2mm, maximum sheet sizes of 1500mm x 3000mm (5ft.x10ft). We required only AUTO CAD design or DWG/DXF files, even all kind of sheets are available with us.


KHAMYA AGRO

KHAMYA AGRO
3rd Cross, Plot No. L3 & L4,
KSSIDC Industrial Area, Lokikere Road,
DAVANAGERE-577005.
Phone : 8317388767 Whatsapp : 8317329919








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte